quickmarketreports.com

Date : 20-10-2015

# ಗೋಡಂಬಿ ಬೆಳೆಯುವ ಪ್ರದೇಶ ಹೆಚ್ಚಳವಿದ್ದರೂ, ಭಾರತದಲ್ಲಿ ಕಚ್ಚಾ ಗೋಡಂಬಿ ಉತ್ಪಾದನೆ ಇಳಿಕೆ

ಹಿಂದಿನ ವರ್ಷ ಗೋಡಂಬಿ ಫಲಬಿಡುವ ಸಮಯದಲ್ಲಿ ಅಕಾಲಿಕ ಮಳೆಯಾದುದರಿಂದ ಕಚ್ಚಾಗೋಡಂಬಿ ಉತ್ಪಾದನೆ ಇಳಿಕೆಯಾಗಿದೆ. ಜಾಗತಿಕ ಗೋಡಂಬಿ ಮಾರುಕಟ್ಟೆ 10 ಶೇಕಡಾಕ್ಕಿಂತ ಹೆಚ್ಚಿನ ಗತಿಯಲ್ಲಿ ವೃದ್ಧಿಸುತ್ತಿದ್ದರೂ, ಹಿಂದಿನ ವರ್ಷ ದೇಶೀ ಕಚ್ಚಾ ಗೋಡಂಬಿ ಉತ್ಪಾದನೆ ಇಳಿಕೆ ಕಂಡಿತ್ತು ಮತ್ತು ಸತತವಾಗಿ ಉತ್ಪಾದನಾ ವಲಯದ ಬೇಡಿಕೆಗಿಂತ ಇಳಿಕೆಯಾಗಿಯೇ ಇದೆ. ಭಾರತದ ಕಚ್ಚಾ ಗೋಡಂಬಿ ಉತ್ಪಾದನೆ 2013–14 ರಲ್ಲಿ 736560 ಟನ್‌ಗಳಿದ್ದು 2014–15ಕ್ಕೆ 725420 ಟನ್‌ಗಳಿಗೆ ಇಳಿಕೆಯಾಗಿದೆ ಎಂದು ಕೇಂದ್ರ ಕೃಷಿ ಸಚಿವಾಲಯದ ಶಾಖೆಯಾದ ಗೋಡಂಬಿ ಮತ್ತು ಕೊಕ್ಕೋ ಅಭಿವೃದ್ಧಿ ನಿರ್ದೆಶನಾಲಯ ತಿಳಿಸಿದೆ. ಗೋಡಂಬಿ ಕೃಷಿ ಪ್ರದೇಶ 2013–14ರಲ್ಲಿ 1007695 ಹೆಕ್ಟೆರ್ ಇದ್ದುದು 2014–15ಕ್ಕೆ 1027200 ಹೆಕ್ಟೇರ್‌ಗೆ ಹೆಚ್ಚಳವಾದರೂ ಕಚ್ಚಾಗೋಡಂಬಿ ಉತ್ಪಾದನೆ ಇಳಿಕೆಯಾಗಿದೆ. ಭಾರತ 2014–15ರಲ್ಲಿ ರೂ 6571 ಕೋಟಿ ಬೆಲೆಯ ಕಚ್ಚಾಗೋಡಂಬಿ ಆಮದು ಮಾಡಿ ರೂ.5433 ಕೋಟಿ ಬೆಲೆಯ ಗೋಡಂಬಿ ತಿರುಳು ರಫ್ತು ಮಾಡಿ ರೂ 1138 ಕೋಟಿ ರೂ.ಗಳ ವಿದೇಶಿ ವಿನಿಮಯ ಗಳಿಕೆಯ ಕೊರತೆ ಕಂಡಿದೆ. 2015–16ನೇ ವರ್ಷದ ಪ್ರಥಮ 8 ತಿಂಗಳುಗಳಲ್ಲಿ ದೇಶ ರೂ. 6000 ಕೋಟಿ ಬೆಲೆಯ ಕಚ್ಚಾ ಗೋಡಂಬಿ ಆಮದು ಮಾಡಿದ್ದು, ರೂ. 2068 ಕೋಟಿ ಬೆಲೆಯ ಗೋಡಂಬಿ ತಿರುಳು ರಫ್ತು ಮಾಡಿ ರೂ. 3932 ಕೋಟಿಯ ವಿದೇಶ ವಿನಿಮಯ ಕೊರತೆ ದಾಖಲಿಸಿದೆ.